ನಾಗಮಂಗಲ ಕ್ಷೇತ್ರದಲ್ಲಿ ಅಕ್ರಮ ಗಣಿಗಾರಿಕೆ

1298(1492) ಶ್ರೀ ಎನ್. ಚಲುವರಾಯ ಸ್ವಾಮಿ (ನಾಗಮಂಗಲ) : ಮಾನ್ಯ ಗಣಿ ಮತ್ತು ಭೂ ವಿಜ್ಞಾನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ನಾಗಮಂಗಲ ಮತಕ್ಷೇತ್ರದ ವ್ಯಾಪ್ತಿಯಲ್ಲಿ ಬರುವ ತಿರುಮಲಾಪುರ ಎಂಬ ಗ್ರಾಮದಲ್ಲಿ ಹತ್ತಿರ ಕಾವೇರಿ ಸ್ಟೋನ್ ಕ್ರಷರ್ಸ್ ರವರು ಬ್ಲಾಸ್ಟಿಂಗ್ ಸರ್ಟಿಫಿಕೇಟ್ ಪಡೆಯದೇ ಕಲ್ಲು ತೆಗೆಯುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ? ಈ ನಿಟ್ಟಿನಲ್ಲಿ ಕೈಗೊಂಡ ಕ್ರಮವೇನು? ಈ ನಿಟ್ಟಿನಲ್ಲಿ ಕೈಗೊಂಡ ಕ್ರಮವೇನು?

ಶ್ರೀ ವಿ. ಮುನಿಯಪ್ಪ (ಗಣಿ ಮತ್ತು ಭೂ ವಿಜ್ಞಾನ ಸಚಿವರು):

ಅ) ಹಿರಿಯ ಭೂ ವಿಜ್ಞಾನಿ, ಗಣಿ ಮತ್ತು ಭೂ ವಿಜ್ಞಾನ ಇಲಾಖೆ, ಮಂಡ್ಯ ಇವರು ನಾಗಮಂಗಲ ತಾಲ್ಲೂಕು, ಇರುಬನಹಳ್ಳಿ ಗೋಮಾಳದ ಸ.ನಂ. 25ರಲ್ಲಿ 0-20 ಗುಂಟೆಗೆ ಅವರ ಕಛೇರಿ ಕ್ವಾರಿ ಲೀಸ್ ಸಂಖ್ಯೆ 533:02 ದಿನಾಂಕ 03.07.2002ರ ಪ್ರಕಾರ ಶ್ರೀ:ಶ್ರೀಮತಿ ಎಸ್.ಚಾಮುಂಡಿ ಬಿನ್ ಲೇಟ್ ಸ್ವಾಮಿನಾಥನ್, ಕಾವೇರಿ ಕ್ರಷರ್ಸ್ ಇವರಿಗೆ ಸೋಲಿಂಗ್ ಜಲ್ಲಿ ಗುತ್ತಿಗೆಗಾಗಿ ಅನುಮತಿ ನೀಡಲಾಗಿದೆ. ಬ್ಲಾಸ್ಟಿಂಗ್ ಮಾಡುವ ಬಗ್ಗೆ ಜಿಲ್ಲಾ ಮ್ಯಾಜಿಸ್ಟ್ರೇಟ್ ರವರಿಂದ ನಿರಾಕ್ಷೇಪಣಾ ಪತ್ರ ಪಡೆದಿರುವುದಿಲ್ಲ. ಈಗ ವಿಷಯವು ಸರ್ಕಾರದ ಗಮನಕ್ಕೆ ಬಂದಿದ್ದು, ಸಿಡಿಮದ್ದು ಕಾಯಿದೆಯಡಿ ಅಗತ್ಯ ಕ್ರಮ ವಹಿಸಲು ಮಂಡ್ಯ ಜಿಲ್ಲಾಧಿಕಾರಿಯವರಿಗೆ ಸೂಕ್ತ ನಿರ್ದೇಶನ ನೀಡಲಾಗುವುದು.

ಶಿವಮೊಗ್ಗ ಕ್ಷೇತ್ರದ ಹೊಸ ಮಸೀದಿಗಳು ಹಾಗೂ ಖಬರ್ ಸ್ತಾನ ನಿರ್ಮಾಣ ಹಾಗೂ ದುರಸ್ತಿ

1299(470) ಶ್ರೀ ಚಂದ್ರಶೇಖರಪ್ಪ ಹೆಚ್.ಎಂ. ಎ.ಎಲ್.ಎ (ಶಿವಮೊಗ್ಗ) : ಮಾನ್ಯ ಅಲ್ಪಸಂಖ್ಯಾತರ ಕಲ್ಯಾಣ ಮತ್ತು ವಕ್ಫ್ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಶಿವಮೊಗ್ಗ ವಿಧಾನ ಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಹೊಸದಾಗಿ ಮಸೀದಿಗಳನ್ನು ಹಾಗೂ ಖಬರ್ ಸ್ತಾನಗಳನ್ನು ನಿರ್ಮಾಣ ಮಾಡಲು ಮತ್ತು ದುರಸ್ತಿಗಾಗಿ ಎಷ್ಟು ಅನುಧಾನವನ್ನು ಬಿಡುಗಡೆ ಮಾಡಲಾಗಿದೆ; ವಿವರ ತಿಳಿಸುವುದು?

ಆ) ಶಿವಮೊಗ್ಗ ನಗರದಲ್ಲಿ ವಕ್ಫ್ ಮಂಡಳಿಗೆ ಸೇರಿದ ನಿವೇಶನ ಹಾಗೂ ಜಮೀನಿನ ವಿಸ್ತೀರ್ಣ ಎಷ್ಟು: ಈ ಪೈಕಿ ಎಷ್ಟು ವಿಸ್ತೀರ್ಣದ ಜಮೀನು ಹಾಗೂ ನಿವೇಶನವನ್ನು ಅಕ್ರಮವಾಗಿ ಖಾಸಗಿಯವರು ಹಾಗೂ ಇತರರು ಒತ್ತುವರಿ ಮಾಡಿರುತ್ತಾರೆ (ವಿವರ ನೀಡುವುದು)?

ಶ್ರೀ ಎಂ.ಎಲ್. ಉಸ್ತಾದ್, (ಅಲ್ಪಸಂಖ್ಯಾತರ ಕಲ್ಯಾಣ ಮತ್ತು ವಕ್ಫ್ ರಾಜ್ಯ ಸಚಿವರು):

ಅ) 2001-2002ನೇ ಸಾಲಿನಲ್ಲಿ ಶಿವಮೊಗ್ಗದ 11 ಮಸೀದಿಗಳು ಹಾಗೂ 1 ಖಬರ್ ಸ್ತಾನಗಳ ನಿರ್ಮಾಣ ಹಾಗೂ ಜೀರ್ಣೋದ್ಧಾರಕ್ಕಾಗಿ ರೂ. 4,65,000/-ಗಳನ್ನು ಮಂಜೂರು ಮಾಡಲಾಗಿದೆ. (ಪಟ್ಟಿ ಲಗತ್ತಿಸಿದೆ. ಅನುಬಂಧ-1)

ಆ) ಒಟ್ಟು 35 ವಕ್ಫ್ ಸಂಸ್ಥೆಗಳಿವೆ. ಈ ಪೈಕಿ 6 ವಕ್ಫ್ ಆಸ್ತಿಗಳು ಒತ್ತುವರಿಯಾಗಿವೆ (ಪಟ್ಟಿ ಲಗತ್ತಿಸಿದೆ. ಅನುಬಂಧ-11)